ಕಬಿನಿ ಜಲಾಶಯ ಯೋಜನೆ.

199(1447) ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮಾರನಹಳ್ಳಿ) :— ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಕಬಿನಿ ಜಲಾಶಯದ ನೀರಿನ ಸಂಗ್ರಹದ ಪ್ರಮಾಣ ಎಷ್ಟು; ಎಷ್ಟು ಭೂ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸುವ ಈ ಜಲಾಶಯವು ಎಷ್ಟು ವಿಸ್ತೀರ್ಣದ ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸುವ ಸಾಮರ್ಥ್ಯ ಹೊಂದಿದೆ?

2. ಈ ಜಲಾಶಯದಿಂದ ಹಾಲಿ ಎಷ್ಟು ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲಾಗುತ್ತಿದೆ ಇದರಿಂದ ನೀರಾವರಿಗೆ ಒಳಪಟ್ಟಿರುವ ಜಮೀನಿನ ವಿಸ್ತೀರ್ಣ ಎಷ್ಟು?

3. ಯೋಜನೆಯನ್ವಯ ಎಷ್ಟು ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲಾಗಿಲ್ಲ ಹಾಗೂ ಎಷ್ಟು ಭೂ ಪ್ರದೇಶವನ್ನು ನೀರಾವರಿಗೆ ಒಳಪಡಿಸಲಾಗಿಲ್ಲ?

4. ಕಬಿನಿ ಎರಡನೆ ಹಂತದ ಯೋಜನೆಯ ಕಾರ್ಯಾರಂಭ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ಇದ್ದಲ್ಲಿ, ಯಾವ ಹಂತದಲ್ಲಿದೆ. ಅದನ್ನು ಕಾರ್ಯಾರಂಭ ಮಾಡಲಾಗುವುದೇ?

5. ನಂಜನಗೂಡು ತಾಲ್ಲೂಕು ಬದನವಾಳು ಚಿಟ್ಟದಗುಂಡಿ ವಿತನೀರಾವರಿಗೆ ಒಳಪಡುವ ಜಮೀನಿನ ವಿಸ್ತೀರ್ಣ ಎಷ್ಟು ಯಾವ ಯಾವ ಗ್ರಾಮಗಳ ಯಾವ ಯಾವ ಸರ್ವೆ ನಂ. ಜಮೀನುಗಳು ಈ ನೀರಾವರಿಗೆ ಒಳಪಡುತ್ತವೆ? (ನಕ್ಷೆಯ ಸಹಿತ ವಿವರ ನೀಡುವುದು)

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) :—

1. ಕಬಿನಿ ಜಲಾಶಯದ ನೀರಿನ ಸಂಗ್ರಹಣೆಯ ಪ್ರಮಾಣ 19.52 ಟಿ.ಎಂ.ಸಿ. ಹರಿನೀರಾವರಿ ವ್ಯವಸ್ಥೆಯಡಿಯಲ್ಲಿ 1,13,000 ಎಕರೆ ಹಾಗೂ ವಿತ ನೀರಾವರಿ ವ್ಯವಸ್ಥೆಯಡಿಯಲ್ಲಿ 1,34,400 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸಬಹುದಾಗಿದೆ.

2. ಈ ಜಲಾಶಯದಿಂದ ಹಾಲಿ 31.50 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲಾಗುತ್ತಿದೆ. ಇದುಂದ 1,01,518 ಎಕರೆ ಪ್ರದೇಶಕ್ಕೆ ನೀರೊದಗಿಸಲಾಗುತ್ತಿದೆ.

3. ಯೋಜನೆಯಡಿಯಲ್ಲಿ 65.00 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲು ಅವಕಾಶವಿದ್ದು 31.50 ಟಿ.ಎಂ.ಸಿ. ನೀರನ್ನು ಮಾತ್ರ ಬಳಸಿಕೊಳ್ಳಲಾಗುತ್ತಿದೆ. ಇನ್ನೂ 33.50 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲಾಗಿಲ್ಲ ಹಾಗೂ ಒಟ್ಟು 1,45,882 ಎಕರೆ (ಹರಿ ನೀರು 11,482 ಎಕರೆ+ ವಿತ ನೀರಾವರಿ 1,34,400 ಎಕರೆ) ಭೂ ಪ್ರದೇಶವನ್ನು ನೀರಾವರಿಗೆ ಒಳಪಡಿಸಲಾಗಿಲ್ಲ.

4. ಇದೆ ಅನ್ವೇಷಣಾ ಹಂತದಲ್ಲಿದೆ. ಬದನವಾಳು ಏತ ನೀರಾವರಿಗೆ ಒಳಪಡುವ ವಿಸ್ತೀರ್ಣ 9053 ಎಕರೆಗಳು ಸದರಿ ಯೋಜನೆಯ ಅಡಿಯಲ್ಲಿ ಬರುವ ಗ್ರಾಮಗಳ ವಿಸ್ತೀರ್ಣದ ವಿವರಗಳು:

					ಪುರಾ
1.	ಗೀಕಳ್ಳಿ	-	21.00	ಎಕರೆ	ಸರ್ವೆ ನಂ. ವಾರು
2.	ಮುಳ್ಳೂರು	-	385.03	-"	ವಿವರಗಳನ್ನು
3.	ಹೊರಳವಾಡಿ	-	81.21.	-"-	ಕಮಾಂಡ್ ಏರಿಯಾ
4.	ಬೆಂಡಗಳ್ಳಿ	-	165.30	-"	ಸರ್ವೆ ಮುಗಿದ
5.	ವೀರದೇವನಪುರ	-	499.04	-"-	ನಂತರ ಸಲ್ಲಿಸ-
6.	ಅಲಗಂಚಿ	-	500.00	-"	ಲಾಗುವುದು.
7.	ಬದನವಾಳು	-	1200.22	-"-	
8.	ಬಸವಟ್ಟಿಗೆ	-	250.00	-"-	
9.	ದೇವನೂರು	-	1800.22	-"-	
10.	ವರಹಳ್ಳಿ	-	200.00	-"-	
11.	ಕಳ್ಳನಹಟ್ಟಿ	-	300.22	-"-	
12.	ತಗಡೂರು	-	2650.00	-"-	

5. ಈ ಹಿಂದೆ ಉದ್ದೇಶಿಸಿದ್ದ ಚಿನ್ನದಗುಡಿಹುಂಡಿ ಏತ ನೀರಾವರಿ ಯೋಜನೆಯಡಿ 2281.00 ಎಕರೆ ವಿಸ್ತೀರ್ಣವು ಬದನವಾಳು ಏತ ನೀರಾವರಿ ಯೋಜನೆಯಡಿಯಲ್ಲಿ ಸೇರಿರುತ್ತದೆ ಹಾಗೂ ಬದನವಾಳು ಏತ ನೀರಾವರಿ ಯೋಜನೆ ಸರ್ಕಾರ ಆದೇಶ ಸಂಖ್ಯೆ : ನೀಇ 168 ಎಂಎಂಕೆ 97, ದಿನಾಂಕ 26-2-99 ರಲ್ಲಿ ಆಡಳಿತಾತ್ಮಕ ಮಂಜೂರಾತಿ ದೊರೆತಿರುತ್ತದೆ.

ಶ್ರೀ ಎ.ಆರ್. ಕೃಷ್ಣ ಮೂರ್ತಿ :— ಸನ್ಮಾನ್ಯ ಅಧ್ಯಕ್ಷರೇ, ನಮ್ಮ ನೂತನ ಜಿಲ್ಲೆಯ ವಿಚಾರದಲ್ಲಿ ನೀರಾವರಿಗೆ ಸಂಬಂಧಪಟ್ಟಹಾಗೆ ಒಂದು ಪ್ರಶ್ನೆಯನ್ನು ಮಾನ್ಯ ನೀರಾವರಿ ಸಚಿವರಲ್ಲಿ, ಕೇಳಿದ್ದೇನೆ. ಮಾನ್ಯ ಸಚಿವರು ಈ ಕಬಿನಿ ಜಲಾಶಯ ನೀರಿನ ಸಂಗ್ರಹ ಪ್ರಮಾಣ ಎಷ್ಟು ಮತ್ತು ಜಿಲ್ಲೆಯ ಉಪಯೋಗ ಎಷ್ಟು ಎಂದು ನಾನು ಕೇಳಿದ ಪ್ರಶ್ನೆಗೆ ಜಲಾಶಯದ ನೀರಿನ ಸಂಗ್ರಹ ಸುಮಾರು 19.52 ಟಿ.ಎಂ.ಸಿ. ಎಂದು ಉತ್ತರವನ್ನು ಕೊಟ್ಟಿದ್ದಾರೆ. ಮತ್ತು ಈ ಜಲಾಶಯದಲ್ಲಿ ಹಾಲಿ ಎಷ್ಟು ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲಾಗುತ್ತಿದೆ, ಎಷ್ಟು ಬಳಸಿಕೊಳ್ಳಲಾಗಿಲ್ಲ ಎಂದು ಪ್ರಶ್ನೆ ಕೇಳಿದ್ದಕ್ಕೆ ಸನ್ಮಾನ್ಯ ಸಚಿವರು ಯೋಜನೆ ಅಡಿಯಲ್ಲಿ 65 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲು ಅವಕಾಶ ಇದ್ದು 31.50 ಟಿ.ಎಂ.ಸಿ. ನೀರನ್ನು ಮಾತ್ರ ಬಳಸಿಕೊಳ್ಳಲಾಗುತ್ತಿದೆ. ಇದರಲ್ಲಿ ಸುಮಾರು

ಒಟ್ಟು ಒಂದು ಲಕ್ಷದ 45 ಸಾವಿರದ 882 ಎಕರೆ ಫ್ಲೋ ಇರಿಗೇಷನ್‌ಗೆ ಬಳಸಿಕೊಳ್ಳಲಾಗಿರುತ್ತದೆ. ಸುಮಾರು 11 ಸಾವಿರದ 482 ಮತ್ತು ಲಿಫ್ಟ್ ಇರಿಗೇಷನ್‌ನಲ್ಲಿ ಒಂದು ಲಕ್ಷದ 34 ಸಾವಿರದ 400ಎಕರೆ ರೂಪುರೇಷೆಯನ್ನು ನೀರಾವರಿಗೆ ಒಳಪಡಿಸಲಾಗಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ನಾನು ತಮ್ಮ ಮುಖೇನ ಸನ್ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ. ಕಬಿನಿ ಫ್ಲೋ ಅಂಡ್ ಲಿಫ್ಟ್ ಇರಿಗೇಷನ್ ಸಂಬಂಧಪಟ್ಟಂತೆ ತಾವೇನು ಅಂಕಿಅಂಶಗಳನ್ನು ಕೊಟ್ಟಿದ್ದೀರಿ, ಮತ್ತು ಸುಮಾರು 65 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಬಹುದು ಎಂದು ಹೇಳಿದ್ದೀರಿ. ಈ ಒಂದು ಯೋಜನೆ ತಮಗೆ ತಿಳಿದಮಟ್ಟಿಗೆ ಒರಿಜಿನಲ್ ಸ್ಕಾಂಕ್ಷನ್ ಆಗಿದ್ದು 1951ರಲ್ಲಿ, ತದನಂತರ 1970 ರಲ್ಲಿ ಮಾಡಿಫೈ ಪ್ರಾಜೆಕ್ಟ್ ಅಪ್ರೂವಲ್ ಆಯಿತು. later on comprehensive Kabini Project estimated cost Rs.390 crores. ಆದ 1986ರಲ್ಲಿ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ಕೂಡ ಆಗಿದೆ. ಹೀಗಿದ್ದರೂ ಕೂಡ ಮಾನ್ಯ ಸಚಿವರು ಕೊಟ್ಟಿರತಕ್ಕ ಉತ್ತರದಲ್ಲಿ, 65 ಟಿ.ಎಂ.ಸಿ. ಬಳಕೆಯಾಗತಕ್ಕ ನೀರನ್ನು ಬರೀ 31.50 ಟಿ.ಎಂ.ಸಿ. ನೀರನ್ನು ಮಾತ್ರ ತಾವು ಉಪಯೋಗ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಇನ್ನುಳಿದ 33.50 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳುವುದಕ್ಕೆ ನಮ್ಮ ರಾಜ್ಯದ ರೈತರಿಗೆ ಅವಕಾಶ ಮಾಡಿಕೊಟ್ಟಿಲ್ಲವೆಂಬ ಅಂಶವನ್ನೂ ಕೂಡ ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ಮತ್ತೊಂದು ಈ ಕಬಿನಿ 2ನೇ ಹಂತದ ಯೋಜನೆಯ ಕಾರ್ಯಾರಂಭ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ಎಂಬ ಪ್ರಶ್ನೆಯನ್ನು ನಾನು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು, yes, under investigation stage ಎಂದು ಉತ್ತರ ಕೊಟ್ಟಿದ್ದಾರೆ. ನಾನು ಈಗಾಗಲೇ ಹೇಳಿದಹಾಗೆ, ಈ ರಿವೈಸ್ಡ್ ಕಾಂಪ್ರಹೆನ್ಸೀವ್ ಎಸ್ಟಿಮೇಟ್ ಏನು ಸರ್ಕಾರದ ಮುಂದೆ ಬಂದಿದೆ, ಅದಕ್ಕೆ ಮಾನ್ಯ ಸಚಿವರು ಸರ್ಕಾರದ ಒಪ್ಪಿಗೆಯನ್ನು ಕೊಟ್ಟಿದ್ದಾರೆಯೇ? ಮತ್ತು ಈ ಯೋಜನೆಯನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಮತ್ತು ಇದನ್ನು ಯಾವಾಗ ಪೂರ್ಣಗೊಳಿಸಿ, ನಮ್ಮ ರಾಜ್ಯದ ರೈತರಿಗೆ, ನೀರಾವರಿಗೆ ಅವಕಾಶ ಮಾಡಿಕೊಡುತ್ತೀರಿ ಎಂಬುದನ್ನು ತಮ್ಮ ಮುಖೇನ ಮಾನ್ಯ ಮಂತ್ರಿಗಳಲ್ಲಿ ಕೇಳಬಯಸುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ :— ಮಾನ್ಯ ಅಧ್ಯಕ್ಷರೇ, ಮಾನ್ಯ ಪ್ರಶ್ನಾಕರ್ತೆಯವರು ಕೇಳಿರತಕ್ಕ ಎಲ್ಲಾ ಪ್ರಶ್ನೆಗಳಿಗೂ ಇಲ್ಲಿಯೇ ಉತ್ತರ ಇದೆ. ಈ ಯೋಜನೆಯ ಅಡಿಯಲ್ಲಿ 65ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲು ಅವಕಾಶವಿದೆ ಎಂದು ಹೇಳಿದ್ದೇವೆ. Only 31.50 T.M.C of water being utilised. Still 33.50 jas to be utilised. ಎಂದು ಹೇಳಿದ್ದೇವೆ. ಅದಕ್ಕೆ 1,150 ಕೋಟಿ ರೂಪಾಯಿಗಳ ಸಮಗ್ರ ಯೋಜನೆಯನ್ನು ಕಬಿನಿ ಯೋಜನೆಗೆ ಅಂದಾಜು ಮಾಡಲಾಗಿದೆ. ಎರಡನೇ ಹಂತದ ಯೋಜನೆಯನ್ನು ತೆಗೆದುಕೊಳ್ಳುತ್ತೀರಾ ಎಂದು ಕೇಳಿದ್ದಾರೆ. It is seriously under consideration before the Government. ಎಂದು ಹೇಳಿದ್ದೇವೆ. ಇವತ್ತು ಬೆಳಿಗ್ಗೆ ನಮ್ಮ ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರ ಕೊಡುವಂಥ ಕಾಲದಲ್ಲಿ ಕಬಿನಿ ಎರಡನೇ ಹಂತದ ಯೋಜನೆಯನ್ನು

ತೆಗೆದುಕೊಳ್ಳಬೇಕೆಂದು ಸರ್ಕಾರ ತೀವ್ರವಾಗಿ ಆಲೋಚನೆ ಮಾಡುತ್ತಾ ಇದೆ, ಅದಕ್ಕೆ ಹಣಕಾಸು ಒದಗಿಸುವ ಬಗ್ಗೆ ಪ್ರಯತ್ನ ಮಾಡುತ್ತೇವೆಂಬ ಮಾತನ್ನು ಹೇಳಿದ್ದಾರೆ. ಆ ಹಿನ್ನೆಲೆಯಲ್ಲಿ, ಇನ್‌ವೆಸ್ಟಿಗೇಷನ್‌ನ್ನು ಮೂರು ತಿಂಗಳಲ್ಲಿ ಪೂರ್ಣ ಮಾಡಿಸುತ್ತೇವೆ.

ಶ್ರೀ ಎ.ಆರ್. ಕೃಷ್ಣಮೂರ್ತಿ :— ನಮ್ಮ ಭಾಗ ಮಳೆಯ ಆಶ್ರಯದ ಭಾಗವಾಗಿರುವುದರಿಂದ, ಮಾನ್ಯ ಸಚಿವರೇನು ಸರ್ಕಾರದ ವತಿಯಿಂದ ಉತ್ತರವನ್ನು ಕೊಟ್ಟಿದ್ದಾರೆ, ಈ ಯೋಜನೆಯನ್ನು ಕಾರ್ಯಗತಗೊಳಿಸುತ್ತೇವೆಂದು ಹೇಳಿದ್ದಾರೆ. ಅದು ಜರೂರಾಗಿ ಆಗಬೇಕು. ಏಕೆಂದರೆ, ಈ ಪ್ರಾಜೆಕ್ಟ್ ಪ್ರಾರಂಭವಾಗಿದ್ದು 1959ರಲ್ಲಿ, ಆದರೆ, ಇಲ್ಲಿಯವರೆಗೆ ಪೂರ್ಣಗೊಂಡಿಲ್ಲವೆಂಬ ಆತಂಕ ನಮ್ಮ ಜನರಲ್ಲಿದೆ. ಮಾನ್ಯ ಸಚಿವರು ಹೇಳಿದಹಾಗೆ, ಅದಷ್ಟು ಜರೂರಾಗಿ, ಒಂದು ಡಿವಿಜನ್ ಓಪನ್ ಮಾಡಿ, ಒಂದು ಕಾಂಪ್ರೆಹೆನ್ಸೀವ್ ಎಸ್ಟಿಮೇಟನ್ನು ಸರ್ಕಾರದ ಮುಂದೆ ಇಟ್ಟು, ಒಪ್ಪಿಗೆ ತೆಗೆದುಕೊಂಡು, ಆ ಭಾಗದ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಮತ್ತೊಮ್ಮೆ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ :— ಇದರ ಬಗ್ಗೆ ಡೀಟೈಲ್ ಇನ್‌ವೆಸ್ಟಿಗೇಷನ್‌ಗೆ ಆರ್ಡರ್ ಮಾಡಿ ಮೂರು ತಿಂಗಳೊಳಗೆ ವರದಿಯನ್ನು ತರಿಸಿಕೊಳ್ಳುತ್ತೇವೆ.

ಧಾರವಾಡದಲ್ಲಿ ವಿದ್ಯುಚ್ಛಕ್ತಿ ಬಳಕೆ.

200(1381) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಧಾರವಾಡ ಜಿಲ್ಲೆಯಲ್ಲಿ ಬಳಕೆಗಾಗಿ ಅವಶ್ಯಕತೆ ಇರುವ ವಿದ್ಯುಚ್ಛಕ್ತಿಯ ಪ್ರಮಾಣ ಎಷ್ಟು?

ಆ) ಪ್ರಸ್ತುತ ಸರಬರಾಜು ಆಗುತ್ತಿರುವ ವಿದ್ಯುಚ್ಛಕ್ತಿಯ ಪ್ರಮಾಣ ಎಷ್ಟು?

ಇ) ಈ ಕೊರತೆಯನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :—

ಅ) ಧಾರವಾಡ ಜಿಲ್ಲೆಯಲ್ಲಿ ವಿದ್ಯುತ್‌ನ ಪ್ರಸ್ತುತ ಅನಿರ್ಬಂಧಿತ ಬೇಡಿಕೆ ಸರಾಸರಿ ದಿನಮಹಿ ಸುಮಾರು 1.75 ದಶಲಕ್ಷ ಯೂನಿಟ್ಟುಗಳೆಂದು ಅಂದಾಜು ಮಾಡಿದೆ.

ಆ) ಪ್ರಸ್ತುತ ಈ ಜಿಲ್ಲೆಗೆ ಸರಬರಾಜಾಗುತ್ತಿರುವ ವಿದ್ಯುತ್ ನ ಪ್ರಮಾಣ ಸರಾಸರಿ ದಿನಮಹಿ ಸುಮಾರು 1.0 ದಶಲಕ್ಷ ಯೂನಿಟ್ಟುಗಳಷ್ಟಾಗಿರುತ್ತದೆ.

ಇ) ಸದ್ಯದ ಪರಿಸ್ಥಿತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ದಿನಮಹಿ 8 ಗಂಟೆಗಳ ನಿಯಮಿತ ಲೋಡ್ ಶೆಡ್ಡಿಂಗ್‌ನ್ನು ನಿರ್ವಹಿಸುವುದು ಅನಿವಾರ್ಯವಾಗಿದೆ. ಅಲ್ಲದೇ, ಸಂಜೆ 6 ರಿಂದ ರಾತ್ರಿ 10 ಗಂಟೆವರೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಸಿಂಗಲ್ ಫೇಸ್‌ನಲ್ಲಿ ವಿದ್ಯುತ್ ಸರಬರಾಜನ್ನು ಮಾಡುವುದೂ ಸಹ ಅನಿವಾರ್ಯವಾಗಿದೆ. ಬೆಳಿಗಿನ ಮತ್ತು